# ಸಂಕೋಚದ ನಾಯಕ

ಬೋರ್ಡಿಂಗ್ ಶಾಲೆಯಲ್ಲಿ ಕಲಿತ ಹಿನ್ನೆಲೆ. ಒರಟಾಗಿ ಮಾತನಾಡುವವರ ಕೌಟುಂಬಿಕ ಹಿನ್ನೆಲೆಗೆ ಅಪವಾದ ಎನ್ನುವಂಥ ವ್ಯಕ್ತಿತ್ವ. ಸಿನಿಮಾ ಸಹವಾಸಕ್ಕೆ ಅಣ್ಣನೇ ಸ್ಫೂರ್ತಿ ಎನ್ನಲು ಅನುಮಾನವಿಲ್ಲ. ಅಭಿನಯದ ತುಡಿತ ಒಳಗೇ ಅದುಮಿಟ್ಟುಕೊಂಡು ಮೊದಲು ವಿತರಣೆಯ ಮರ್ಮಗಳನ್ನು ಅರಿಯಲು ಹೊರಟಾಗ ಅತ್ತ ದಿನಗಳಿಗೆ ಲೆಕ್ಕವಿಲ್ಲ. ಒಮ್ಮೆಯಂತೂ ಬಟ್ಟೆಗಳನ್ನೆಲ್ಲಾ ಕಳಚಿ ಈ ಲೋಕದ ಗೊಡವೆಯೇ ಬೇಡ ಎಂದು ಮನೆ ಬಿಟ್ಟು ಹೋಗಲು ಅಣಿಯಾದವರು ಅವರು. ಅದನ್ನು ಕಂಡು ಸ್ಟಾರ್ ನಟನಾಗಿ ಅದಾಗಲೇ ಬೆಳೆದಿದ್ದ ಅಣ್ಣ ಕೂಡ ಬೆರಗುಗೊಂಡಿದ್ದಿದೆ. ಆಗ ತಮ್ಮನನ್ನು ಸಮಾಧಾನ ಪಡಿಸುವಷ್ಟರಲ್ಲಿ ಅವರಿಗೆ ಸಾಕು ಸಾಕಾಗಿಹೋಗಿತ್ತು.

ವಿತರಣೆಯ ಮೂಲಕ ಮಾರುಕಟ್ಟೆಯ ಮರ್ಮ ಅರಿತ ಮೇಲೆ, ಜ್ಞಾನೋದಯದ ನಂತರ ಅಭಿನಯ ಲೋಕಕ್ಕೆ ಈ ಕಾನೂನು ಪದವೀಧರ ಕಾಲಿಟ್ಟರು. ಮೆಲುದನಿಯ ಮಾತುಗಾರ. ವ್ಯಕ್ತಿತ್ವದಲ್ಲಿಯೇ ಮಹಾ ಸಂಕೋಚ. ಒಮ್ಮೆ ಮಲ್ಲೇಶ್ವರದ ಹೋಟೆಲ್‌ನಲ್ಲಿ ಸಂದರ್ಶನಕ್ಕೆ ಒಪ್ಪಿ ಬಂದರು. ಕಾರಿನಿಂದ ಇಳಿಯಲೂ ಅವರು ಹಿಂದೆ ಮುಂದೆ ನೋಡಿದರು. ಹಾಸ್ಯಪಾತ್ರಗಳಲ್ಲಿ ಮಿಂಚಿದ್ದ ಅವರು ಪ್ರೇಕ್ಷಕರಿಗೆ ಚಿರಪರಿಚಿತರಾಗಿದ್ದುದೇ ಇದಕ್ಕೆ ಕಾರಣ. ಕಾರಿನಿಂದ ಇಳಿದು ಧಾವಂತದಿಂದಲೇ ಅವರು ಹೋಟೆಲ್ ಮೆಟ್ಟಿಲುಗಳನ್ನು ಹತ್ತಿದ್ದು. ಒಳಗೆ ಸ್ಪೀಕರ್‌ನಲ್ಲಿ ಹಾಡೊಂದು ಕೇಳಿತ್ತಿತ್ತು. ವೇಟರ್ ಬಂದದ್ದೇ ಮೊದಲು ಹೇಳಿದ್ದು, 'ಸರ್, ಇದು ನೀವು ಆ್ಯಕ್ಟ್ ಮಾಡಿದ್ದೇ ಸಿನಿಮಾದ ಹಾಡು'. ಇವರು ಸಂಕೋಚದಿಂದ ಒದ್ದೆಮುದ್ದೆಯಾದರು. 'ತಿನ್ನೋಕೆ ಏನು ಕೊಡ್ತೀಯಪ್ಪಾ' ಎಂದು ಮಾತು ಬದಲಿಸಿದರು. ವೇಟರ್‌ನನ್ನು ಪಕ್ಕಕ್ಕೆ ಕರೆದು, 'ಅಭಿಮಾನ ಅಂತೆಲ್ಲಾ ಏನೇನೋ ಮಾತನಾಡಬೇಡಿ, ಪ್ಲೀಸ್' ಎಂದು ಅಲವತ್ತುಕೊಂಡರು. ವೇಟರ್ ಕಣ್ಣುಗಳು ತಂತಾವೇ ಅಗಲವಾದವು.

ಹೋಟೆಲ್‌ನಲ್ಲಿ ಅವರು ಮಾತು ಮುಂದುವರಿಸಿದ ಕೆಲವೇ ನಿಮಿಷಗಳಲ್ಲಿ ಬರುವ ಜನರ ಸಂಖ್ಯೆಯೂ ಹೆಚ್ಚಿತು. ಕೆಲವರು ಅವರತ್ತ ಅಭಿಮಾನದ ನೋಟ ಬೀರತೊಡಗಿದರು. ಒಬ್ಬಾತ ನುಗ್ಗಿಬಂದು, ಆಟೊಗ್ರಾಫ್‌ಗೇ ಮೊರೆಯಿಟ್ಟ. ಅಲ್ಲಿ ಇನ್ನಷ್ಟು ಹೊತ್ತು ಕೂರುವುದು ಕ್ಷೇಮವಲ್ಲ ಎಂದು ಭಾವಿಸಿದ ನಟ, ಎದ್ದು ಬಿರಬಿರನೆ ನಡೆಯತೊಡಗಿದರು. ಉಳಿದ ಮಾತನ್ನು ಕಾರಿನಲ್ಲೇ ಹೇಳಿ ಮುಗಿಸುವಷ್ಟರಲ್ಲಿ, ಅಲ್ಲಿಯೂ ಅಭಿಮಾನಿಗಳು ಇಣುಕತೊಡಗಿದರು. ಕರವಸ್ತ್ರದಿಂದ ಹಣೆಮೇಲಿನ ಹನಿಗಳನ್ನು ಒರೆಸಿಕೊಂಡಂತೆ ನಟ ಮಾಡಿದರೂ ಅದರ ಮೇಲಿದ್ದ ವಿಭೂತಿ ನಗುತ್ತಿತ್ತು. 'ಈ ಜನರನ್ನು ನಿಭಾಯಿಸುವುದು ಕಷ್ಟ ಸರ್' ಎಂದು ಅವರು ಅಂದು ಹೇಳಿದ ಮಾತು ಕಿವಿಯಲ್ಲಿ ನಿಂತೇ ಇದೆ. ಈಗ ಅವರು ಸ್ವತಂತ್ರ ನಾಯಕನಾಗಿ ನಟಿಸುತ್ತಿದ್ದಾರೆನ್ನುವುದು ವಿಶೇಷ.

● ವಿಶಾಖ ಎನ್.

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68